

ತಂಪಿಗೆ ಮೈಯೊಡ್ಡಲು ಈ ಸ್ಥಳ ಕರ್ಣನಿಗೆ ಸೂಕ್ತ ಎನಿಸಿರಬೇಕು. ಹೀಗಾಗಿಯೇ ನಾವು ಬೋಟಿನಲ್ಲಿ ಅವನ ಹುಡುಕುತ್ತಾ ಇಲ್ಲಿಗೆ ಬರುತ್ತಲೇ ಇದ್ದೇವೆ. ಒಂದೆರಡು ದಿನ ಕಣ್ಮರೆಯಾಗಿ ಬೆಟ್ಟ ಹತ್ತಿಳಿದು ತನ್ನ ತಾಯಿಯ ಬಳಿ ಹೋಗಿ ಬರುವ ಕರ್ಣ ಉಳಿದಂತೆ ಇಲ್ಲಿರುವ ಕತ್ತಲೆಯ ಸಂದಿಗೊಂದಿಗಳಲ್ಲಿ ಪವಡಿಸುತ್ತಾನೆ.

'ನಿನ್ನೆ ಮಧ್ಯಾಹ್ನ ನಿಮ್ಮ ಕಿತಾಪತಿ ಕರ್ಣ ದುಸ್ಸಾಹಸ ಮಾಡೋಕೆ ಹೋಗಿ ಜೀವಕ್ಕೇ ಸಂಚಕಾರ ಮಾಡ್ಕೊಂಡ್ಬಿಟ್ಟಿತ್ತು' ಎಂದು ಬೋಟಿನ ಸಾರಥಿ ಶಂಕರ ಸಂಚಲನದ ಸುದ್ದಿಯೊಂದನ್ನು ಬಿತ್ತರಿಸಿದ. ಇನ್ನೂ ಹರೆಯದ ಹುರುಪಿನಲ್ಲಿರುವ ಕರ್ಣನ ವಯಸ್ಸಿನ ಚಿರತೆಗಳು ಏನೇನೋ ಹುಚ್ಚಾಟ ಮಾಡಲು ಹೋಗಿ ಎಡವಟ್ಟು ಮಾಡಿಕೊಳ್ಳುವುದು ಮಾಮೂಲು ವಿಷಯ. ಕೆಲ ಚಿರತೆಗಳು ಅನುಭವವಿಲ್ಲದೆ ಮೊಸಳೆ ಹಿಡಿಯಲು ಹೋಗಿ ಮೊಸಳೆಗೇ ಆಹಾರವಾಗಿರುವ ಉದಾಹರಣೆಗಳಿವೆ. ಹುಲಿಯ ಬೇಟೆ ಕಿತ್ತುಕೊಳ್ಳಲು ಹೋಗಿ ಸಿಕ್ಕು ಬಿದ್ದು ಮುಖಮೂತಿ ಇಲ್ಲವಾಗಿಸಿಕೊಂಡಿರುವ ಚಿರತೆಗಳಿಗೂ ಕೊರತೆಯಿಲ್ಲ. ಮುಳ್ಳು ಹಂದಿಯನ್ನು ಹಿಡಿಯಲು ಹೋಗಿ ಕಣ್ಣು, ನಾಲಗೆ ಕಳಕೊಳ್ಳುವುದು; ವಿಷದ ಹಾವಿನ ತಂಟೆಗೆ ಹೋಗಿ ಸಾವೀಗೀಡಾಗುವುದು ಎಲ್ಲವೂ ಇಲ್ಲಿ ಮಾಮೂಲು. ಇಂತಹ ಹುಚ್ಚು ಸಾಹಸಗಳ ಮಾಡದಿದ್ದರೆ ಕಾಡಿನಲ್ಲಿ ಬದುಕುಳಿಯಲು ಸಾಧ್ಯವಿಲ್ಲ. ಬದುಕುಳಿಯುವ ಎಲ್ಲಾ ಕಠಿಣ ಸವಾಲಿಗೂ ಇಲ್ಲಿ ಪ್ರತಿ ಪ್ರಾಣಿಯೂ ತಯಾರಾಗಿರಲೇಬೇಕು.

ಬಿಸಿರಕ್ತದ ತರುಣ ನಮ್ಮ ಕುಂಭಕರ್ಣ ಪಕ್ಕಾ ಪ್ಲ್ಯಾನ್ ಮಾಡದೆ ಅತ್ಯುತ್ಸಾಹದಲ್ಲಿ ಬೇಟೆಗೆ ಹೋಗಿ ತೊಂದರೆಗೆ ಸಿಲುಕಿದ್ದು ಹೇಗೆಂದು ಶಂಕರನ ಕೆದಕಿ ಕೇಳಿದೆ. ಸಫಾರಿಗೆ ಬಂದಿದ್ದ ಪ್ರವಾಸಿಗರೊಬ್ಬರು ತೆಗೆದಿದ್ದ ವಿಡಿಯೋ ತುಣುಕನ್ನು ಶಂಕರ ತೋರಿಸಿದ. ಅದನ್ನು ನೋಡಿಯೇ ಎದೆ ಝುಲ್ ಎಂದಿತು. ಎತ್ತರದ ಮರದ ಮೇಲಿದ್ದ ಕರ್ಣ ಇಪ್ಪತ್ತು ಅಡಿಗಿಂತ ಕೆಳಗಿನ ಗಿಡದ ಮೇಲಿದ್ದ ಮುಸಿಯನ ಹಿಡಿಯಲು ಗಾಳಿಯಲ್ಲಿ ಹಾರಿಬಿಟ್ಟ. ಮುಸಿಯ ಕೂತ ಗಿಡ ಚಿಕ್ಕದಿದ್ದು ಅದರ ಮೇಲೆ ಹಬ್ಬಿದ್ದ ಅಗಾಧ ಬಳ್ಳಿಯ ಕಾರಣಕ್ಕೆ ಅದು ದೊಡ್ಡ ಮರದಂತೆ ಭಾಸವಾಗುತ್ತಿತ್ತು. ಅಷ್ಟು ಎತ್ತರದಿಂದ ಅಚಾನಕ್ಕಾಗಿ ಹಾರಿದ ಕರ್ಣನ ನೋಡಿದ ಮುಸಿಯ ಕರ್ಣನ ವಿರುದ್ಧ ದಿಕ್ಕಿಗೆ ಹಾರಿ ತಪ್ಪಿಸಿಕೊಂಡು ಬಿಟ್ಟಿತು. ಕರ್ಣ ಹಾರಿ ಬಂದು ಗಿಡವನ್ನು ಆಸರೆ ಮಾಡಿ ಹಿಡಿದು ನಿಲ್ಲುವಷ್ಟು ಅದು ಬಲಿಷ್ಟವೂ ಆಗಿರಲಿಲ್ಲ. ಬಳ್ಳಿಗಳನ್ನೇ ಹಿಡಿದು ನೆಲೆಯೂರಲು ಬ್ಲಾಕಿ ಚಡಪಡಿಸಿತಾದರೂ ಅದೂ ಸಾಧ್ಯವಾಗಲಿಲ್ಲ. ಕೆಳಗೆ ಮತ್ತಷ್ಟು ಪ್ರಪಾತವಿದ್ದು ಕಲ್ಲು ಬಂಡೆಗಳೂ ಇದ್ದವು. ಅತ್ತ ಮುಸಿಯನೂ ಸಿಗದೆ ಇತ್ತ ಕರ್ಣ ದಪ್ಪನೆ ಪ್ರಪಾತದೆಡೆಗೆ ಬಿದ್ದೇ ಹೋದ. ಎಷ್ಟು ಏಟಾಯಿತೋ? ಹೇಗೆ ಬಚಾವಾದನೋ ಅದೂ ಗೊತ್ತಾಗಲಿಲ್ಲ.